ಹೆಚ್ಚಿನ ಅನುದಾನ ನೀಡುವುದು

368 (2438) ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ) :– ಮಾನ್ಯ ಗ್ರಾಮೀಣ, ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೆನಾಡಿನ ಪ್ರದೇಶವಾದ ಸಾಗರ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವಾರ್ಷಿಕವಾಗಿ ತಾಲ್ಲೂಕಿಗೆ ಕೇವಲ ರೂ.10–12 ಲಕ್ಷ ಮಂಜೂರು ಮಾಡುವುದರಿಂದ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಯದ ಕಾರಣ ಬರ ಪರಿಹಾರ ಅಥವಾ (ಟಾಸ್ಕ್‌ಫೋರ್ಸ್) ಸಮಿತಿಗೆ ಹೆಚ್ಚಿನ ಅನುದಾನವನ್ನು ಸರ್ಕಾರ ಬಿಡುಗಡೆ ಮಾಡಲು ಇರುವ ತೊಂದರೆಗಳೇನು?

ಶ್ರೀ ಎಸ್.ಎ. ರವೀಂದ್ರನಾಥ (ಗ್ರಾಮೀಣ, ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು) :

ಅ) ಬೇಸಿಗೆ ಕಾಲದಲ್ಲಿ ಸಾಗರ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಶಿವಮೊಗ್ಗ ಜಿಲ್ಲಾ ಪಂಚಾಯತಿಗೆ 2006–07ರ ಸಾಲಿನಲ್ಲಿ ಕುಡಿಯುವ ನೀರಿಗಾಗಿ ರೂ.1335.95 ಲಕ್ಷ ಬಿಡುಗಡೆ ಮಾಡಲಾಗಿದೆ. ಈ ಪೈಕಿ ಟಾಸ್ಕಫೋರ್ಸ್ ಕಾಮಗಾರಿಗಳಿಗಾಗಿ ರೂ.164.50 ಲಕ್ಷ ಬಿಡುಗಡೆಯಾಗಿದೆ. 2006–07ರ ಸಾಲಿನಲ್ಲಿ ಸಾಗರ ತಾಲ್ಲೂಕಿಗೆ ಕುಡಿಯುವ ನೀರಿನ ಬಾಬ್ತಿಗಾಗಿ ರೂ.193.46 ಲಕ್ಷ ವಿನಿಯೋಗಿಸಲಾಗಿದೆ. ವಾಸ್ತವಿಕ ಅಗತ್ಯತೆ ಆಧರಿಸಿ ಅನುದಾನ ಬಿಡುಗಡೆಗೆ ಕ್ರಮ ವಹಿಸಲಾಗುತ್ತಿದೆ.

ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಳೂರು :– ಮಾನ್ಯ ಛೇರ್ಮನ್‌ರೇ, ಉತ್ತರವನ್ನು ಒದಗಿಸಿದ್ದಾರೆ. ನಾನು ಕೇಳಿದ್ದು ಏನೆಂದರೆ, ತಾಲ್ಲೂಕಿನಲ್ಲಿ ನೀರಿನ ಕೊರತೆ ಇದೆ ಎಂದು ಕೇಳಿದ್ದಕ್ಕೆ, ಕುಡಿಯುವ ನೀರಿನ ಸಮಸ್ಯೆ ಕೆಲವು ಹಳ್ಳಿಗಳಲ್ಲಿ ಇದೆ ಎಂದು ಹೇಳಿದ್ದಾರೆ. ಮಲೆನಾಡು ಪ್ರದೇಶಗಳಲ್ಲಿ ಎರಡು ಮೂರು ಮನೆಗಳೇ ಜಾಸ್ತಿ ಇರುವುದರಿಂದ ಅಲ್ಲಿ ಕುಡಿಯುವ ನೀರು ಬಿಡಲಿಕ್ಕೆ ತುಂಬ ಕಷ್ಟವಾಗಿದೆ. ಇವತ್ತಿಗೂ ಅವರು ಕೆರೆಯ ನೀರನ್ನೇ ಕುಡಿಯುತ್ತಿದ್ದಾರೆ. ಸರ್ಕಾರದವರು ನಾವು ಅನುದಾನವನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ. ಯಾವ ಹಣವೂ ಇದುವರೆಗೂ ಬಂದಿಲ್ಲ. ಶಾಸಕರ ಸಮಿತಿಯಲ್ಲಿ ಬಂದಿದ್ದಂತಹ ಟಾಸ್ಕ್ ಫೋರ್ಸ್‌ನಲ್ಲಿ ಸಹ ಎಂಟು ಲಕ್ಷ, ಐದು ಲಕ್ಷ, ಏಳು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾರೆ.

ನಾವು ಗ್ರಾಮೀಣ ಪ್ರದೇಶದ ಜನರಿಗೆ ಹೇಗೆ ನೀರು ಕೊಡಬೇಕೆಂದು ನಮ್ಮ ಸಚಿವರು ನಮಗೆ ಉತ್ತರ ಕೊಡಬೇಕು.

ಶ್ರೀ ಸಿ.ಎಂ. ಉದಾಸಿ :– ಮಾನ್ಯ ಛೇರ್ಮನ್‌ರೇ, ಮಾನ್ಯ ಶಾಸಕರು ಕೇಳಿದ ಹಾಗೆ ಸಾಗರ ಕ್ಷೇತ್ರದಲ್ಲಿ ಎರಡು ಮೂರು ಮನೆಗಳಿದ್ದಂತಹ ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೆ ತೊಂದರೆಯಾಗಿದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಆದರೆ ಸಾಗರ ತಾಲ್ಲೂಕಿನಲ್ಲಿ 1250 ಜನವಸತಿಗಳಿವೆ. ಇಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ 61 ನಳ ನೀರು ಸರಬರಾಜು ಯೋಜನೆ ಇದೆ. 66 ಕಿರು ನೀರು ಸರಬರಾಜು ಯೋಜನೆಗಳಿವೆ. 1519 ತೆರೆದ ಬಾವಿಗಳು, 670 ಕೈ ಪಂಪುಗಳನ್ನು ಒದಗಿಸಲಾಗಿದೆ. ಈ ಪೈಕಿ 2199 ಯೋಜನೆಗಳು ಚಾಲನೆಯಲ್ಲಿವೆ ಎನ್ನುವುದನ್ನು ನಮ್ಮ ಇಲಾಖೆಯ ವತಿಯಿಂದ ನಮ್ಮ ಗಮನಕ್ಕೆ ಬಂದಿದೆ. ಇಂತಹ ಪರಿಸ್ಥಿತಿ ಇರುವಾಗ, ಇವತ್ತು ಅವರು ಹೇಳಿದ ಹಾಗೆ ಟಾಸ್ಕ್ ಫೋರ್ಸ್ ನ ಕಾಮಗಾರಿಗಳಿಗೆ 164 ಲಕ್ಷ ರೂಪಾಯಿಗಳಷ್ಟು ಹಣವನ್ನು ಬಿಡುಗಡೆ ಮಾಡಿ ಆಗಿದೆ. ಹಾಗೂ ಒಟ್ಟು 193 ಲಕ್ಷ ರೂಪಾಯಿಗಳಷ್ಟು ಹಣ ಖರ್ಚು ಮಾಡಿ ಆಗಿದೆ. ಇದೆಲ್ಲಾ ಇರಬೇಕಾದಾಗ ನೀರಿನ ಸಮಸ್ಯೆ ಇಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಆದರೂ ಸಹಿತ ಟಾಸ್ಕ್ ಫೋರ್ಸ್‌ನಲ್ಲಿ ಹಣ ಬಿಡುಗಡೆ ಆಗಬೇಕೆಂಬ ಇವರ ಬೇಡಿಕೆ ಏನಿದೆ, ಆ ಹಣವನ್ನು ಅತಿ ಶೀಘ್ರದಲ್ಲಿ ಬಿಡುಗಡೆ ಮಾಡುವಂತಹ ಕೆಲಸವನ್ನು ನಾವು ಮಾಡುತ್ತೇವೆ ಎನ್ನುವುದನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈಗಾಗಲೇ ಇಲ್ಲಿಯವರೆಗೆ ರಾಜ್ಯಾದ್ಯಂತ 41.62 ಲಕ್ಷ ರೂಪಾಯಿಗಳಷ್ಟು ಹಣ ಬಿಡುಗಡೆ ಮಾಡಿ ಆಗಿದೆ, 20 ಕೋಟಿ ರೂಪಾಯಿಗಳಷ್ಟು ಹಣ ರಾಜ್ಯದಲ್ಲಿ ಖರ್ಚಾಗಿದೆ. ಅದರಲ್ಲಿ ಶಿವಮೊಗ್ಗ ಜಿಲ್ಲೆಗೆ 123 ಲಕ್ಷ ರೂಪಾಯಿಗಳಷ್ಟು ಹಣ ಬಿಡುಗಡೆ ಆಗಿದೆ. 44 ಲಕ್ಷ ರೂಪಾಯಿ ಹಣ ಖರ್ಚಾಗಿದೆ. ಉಳಿದ ಹಣ ಬಿಡುಗಡೆ ಮಾಡಲಿಕ್ಕೆ ವ್ಯವಸ್ಥೆಯನ್ನು ಮಾಡಲಾಗುವುದು ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಳೂರು :– ಮಾನ್ಯ ಅಧ್ಯಕ್ಷರೆ, ಅವರು ಹೇಳಿದ್ದು ಉತ್ತರದಲ್ಲಿ ಕೊಟ್ಟಿದ್ದಾರೆ. ಆದರೆ ಇಲ್ಲಿಯವರೆಗೆ ಅಂತಹ ಹಣ ಯಾವುದೂ ಬಿಡುಗಡೆ ಆಗಿಲ್ಲ. ಟಾಸ್ಕ್‌ಫೋರ್ಸ್‌ನಲ್ಲಿ ಕೊಡತಕ್ಕಂತಹ ಹಣ ಈಗಾಗಲೇ 8 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ 8 ಲಕ್ಷ ರೂಪಾಯಿಗಳನ್ನು ನಾವು ಇಡೀ ತಾಲ್ಲೂಕಿನಲ್ಲಿ ಹೇಗೆ ಹಂಚಿಕೆ ಮಾಡಬೇಕೆಂಬ ಬಗ್ಗೆ ತಾವು ಯೋಚನೆ ಮಾಡಬೇಕು. ಒಂದು ಗ್ರಾಮಪಂಚಾಯಿತಿಯಲ್ಲಿ 8 ಲಕ್ಷ ರೂಪಾಯಿಗಳು ಬರುತ್ತವೆ. ಅದರ ಬಗ್ಗೆ ನಮ್ಮ ಮಾನ್ಯ ಸಚಿವರು ಉತ್ತರ ಕೊಡಬೇಕು. ಏಕೆಂದರೆ ಇವತ್ತು ಬಹಳ ಕಷ್ಟ ಇದೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಕೂಡ ಜನ ಇವತ್ತಿಗೂ ಕೆರೆ ನೀರು ಕುಡಿಯುತ್ತಿದ್ದಾರೆ ಎಂದರೆ, ನಾವು

ತಲೆ ತಗ್ಗಿಸಬೇಕಾಗಿದೆ. ಇದರ ಬಗ್ಗೆ, ಮಾನ್ಯ ಸಚಿವರು ಹೆಚ್ಚಿನ ಒತ್ತನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಧ್ರುವನಾರಾಯಣ :– ಅವರು ಹೇಳಿರತಕ್ಕಂಥದ್ದು ಜಿಲ್ಲಾ ಪಂಚಾಯಿತಿಗೆ ಹಣ ಬಿಡುಗಡೆ ಆಗಿರುವಂಥದ್ದು. ಕ್ರಿಯಾ ಯೋಜನೆಯಲ್ಲಿ ಸೇರಿಸಿ ಬಿಡುಗಡೆ ಆಗಿರತಕ್ಕಂತಹ ಹಣವನ್ನು ತಾವು ಓದುತ್ತಿದ್ದೀರಿ. ಆದರೆ ನಮ್ಮ ಭಾಗದಲ್ಲಿ ಈಗಾಗಲೇ ಬರವೆಂದು ಘೋಷಣೆಯಾಗಿದೆ. ಇಲ್ಲಿ ಬಹಳಷ್ಟು ಕುಡಿಯುವ ನೀರಿನ ಸಮಸ್ಯೆ ಇದೆ. ಈಗಾಗಲೇ ಇಲ್ಲಿ ಹಲವಾರು ಬೋರ್‌ವೆಲ್‌ಗಳು ಬತ್ತಿ ಹೋಗಿವೆ. ಈಗ ಪುನಃ ತಕ್ಷಣ ಅಲ್ಲಿ ಒಂದು ಬೋರ್‌ವೆಲ್ ಕೊರೆಸಿ ಆ ಗ್ರಾಮಕ್ಕೆ ನೀರು ಕೊಡಿಸುವ ವ್ಯವಸ್ಥೆ ಆಗಬೇಕು. ಆದರೆ ಮಾನ್ಯ ಸಚಿವರೆ, ತಾವೇನು ಓದುತ್ತಿದ್ದೀರಿ ಜಿಲ್ಲಾ ಪಂಚಾಯತಿ ಹಣದ ಬಗ್ಗೆ, ಆ ಹಣವನ್ನು ಇದಕ್ಕೆ ಬಳಸುವುದಕ್ಕೆ ಆಗುವುದಿಲ್ಲ. ನಾಳೆ ಅಧಿವೇಶನ ಕಡೆಯಾಗುತ್ತದೆ. ಆದುದರಿಂದ ದಯಮಾಡಿ ಪ್ರತಿ ಕ್ಷೇತ್ರಕ್ಕೆ ಟಾಸ್ಕ್‌ಫೋರ್ಸ್‌ಗೆ ಈ ರೀತಿಯಾಗಿ ತಕ್ಷಣ ಬೋರ್‌ನ್ನು ಒದಗಿಸಿ ನೀರು ಕೊಡತಕ್ಕಂಥದ್ದಕ್ಕೆ ಹಣವನ್ನು ಬಿಡುಗಡೆ ಮಾಡುತ್ತೇನೆಂದು ಮಾನ್ಯ ಸಚಿವರು ಇಂದೇ ಘೋಷಣೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಿ. ಸುನಿಲ್ ಕುಮಾರ್ :– ಮಾನ್ಯ ಛೇರ್ಮನ್‌ರವರೆ, ಇತ್ತೀಚೆಗೆ ನೀರಿನ ಸಮಸ್ಯೆ ಬಹಳ ದೊಡ್ಡ ಪ್ರಮಾಣದಲ್ಲಿ ಬೇಸಿಗೆ ಕಾಲದಲ್ಲಿದೆ. ಈ ಸಮಸ್ಯೆ ಕೇವಲ ಸಾಗರಕ್ಕೆ ಮಾತ್ರ ಸೀಮಿತವಾಗಿಲ್ಲ. ಈ ಹಿನ್ನೆಲೆಯಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿರುವಂಥ ಟಾಸ್ಕ್ ಫೋರ್ಸ್‌ಗೆ ಹಣವನ್ನು ಬಿಡುಗಡೆ ಮಾಡಬೇಕೆಂದು ಸಾಕಷ್ಟು ಬಾರಿ ಒತ್ತಾಯವನ್ನು ಮಾಡಿದರೂ ಕೂಡ ಸರ್ಕಾರ ಇದುವರೆಗೂ ಆ ಸಮಿತಿಗೆ ದುಡ್ಡನ್ನು ಕೊಟ್ಟಿಲ್ಲ. ಇನ್ನು ಉಳಿದಿರುವಂಥ ಒಂದೂವರೆ ತಿಂಗಳ ಬೇಸಿಗೆ ಅವಧಿಯಲ್ಲಿ ತುರ್ತು ಕುಡಿಯುವ ನೀರಿನ ನಿರ್ವಹಣೆಗೋಸ್ಕರ ಶಾಸಕರ ನೇತೃತ್ವದ ಪ್ರತಿಯೊಂದು ಟಾಸ್ಕ್‌ಫೋರ್ಸ್‌ಗೆ 50 ಲಕ್ಷ ರೂಪಾಯಿಗಳನ್ನಾದರೂ ತಕ್ಷಣ ಸರ್ಕಾರ ಕೊಡಬೇಕು. ಆ ಹಿನ್ನೆಲೆಯಲ್ಲಿ ಮಾನ್ಯ ಸಚಿವರು ಖಚಿತವಾದ ಭರವಸೆಯನ್ನು ಕೊಡಬೇಕೆಂದು ಈ ಮುಖಾಂತರ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಐವಾನ್ ನಿಗ್ಲಿ :– ಮಾನ್ಯ ಛೇರ್ಮನ್‌ರವರೆ, ಏಳು ಸಿ.ಎಂ.ಸಿ. ಲಿಮಿಟ್‌ನಲ್ಲಿ ಜನಸಂಖ್ಯೆ ಹೆಚ್ಚಿರುವುದರಿಂದ ಕುಡಿಯುವ ನೀರಿಗೆ ಇಲ್ಲಿ ಬಹಳ ಕಷ್ಟವಾಗಿದೆ. ಈಗಾಗಲೇ ಸಿಟಿ ಲಿಮಿಟ್‌ನಲ್ಲಿ ಬೋರ್‌ವೆಲ್ ಕೊರೆಯುವುದಕ್ಕೆ ಆರ್ಡರ್ ಕೊಟ್ಟಿದ್ದಾರೆ. ಆದರೆ ಮಹದೇವಪುರ ಸಿ.ಎಂ.ಸಿ. ಮತ್ತು ಕೆ.ಆರ್.ಪುರ ಸಿ.ಎಂ.ಸಿ ಯಲ್ಲಿ ನೀರಿನ ಕೊರತೆ ಬಹಳ ಇದೆ. ಆದುದರಿಂದ ಅಲ್ಲಿಗೆ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಸಚಿವರು) :– ಸನ್ಮಾನ್ಯ ಛೇರ್ಮನ್‌ರವರೆ, ಟಾಸ್ಕ್‌ಫೋರ್ಸ್‌ಗೆ ಹಣ ಬಿಡುಗಡೆ ಮಾಡಬೇಕೆನ್ನುವ ಬೇಡಿಕೆ ಏನಿದೆ ಇದರ ಬಗ್ಗೆ ಕುಡಿಯುವ ನೀರಿನ ಪೂರೈಕೆ ಸಚಿವರ ಗಮನಕ್ಕೆ ತಂದು ಹಣ ಬಿಡುಗಡೆ ಮಾಡಿಸುವಂಥ ವ್ಯವಸ್ಥೆಯನ್ನು ಅತಿ ಶೀಘ್ರದಲ್ಲಿಯೇ ಮಾಡಿಸುತ್ತೇನೆ ಎಂದು ಹೇಳಬಯಸುತ್ತೇನೆ. ಇನ್ನು ಮಾನ್ಯ ಐವಾನ್ ನಿಗ್ಲಿಯವರು ನಗರ ಪ್ರದೇಶಕ್ಕೆ ಸೀಮಿತವಾಗಿರತಕ್ಕಂಥ ಉಪ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಹಣ ಬಿಡುಗಡೆ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್. ಧ್ರುವನಾರಾಯಣ್ :– ಟಾಸ್ಕ್‌ಫೋರ್ಸ್‌ಗೆ ತಕ್ಷಣ ಹಣ ಬಿಡುಗಡೆ ಮಾಡಿಸುತ್ತೇನೆಂದು ನೀವು ಹೇಳಬೇಕು. ಬೇಸಿಗೆ ಕಾಲ ಮುಗಿದುಹೋದ ಮೇಲೆ ನೀವು ಹಣ ಬಿಡುಗಡೆ ಮಾಡಿದರೆ ಉಪಯೋಗ ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿ.ಎಂ. ಉದಾಸಿ :– ಹಣ ಬಿಡುಗಡೆ ಮಾಡಬೇಕು ಎಂದು ತಮ್ಮ ಬೇಡಿಕೆ ಏನಿದೆಯಲ್ಲ ಇದನ್ನು ಅತಿ ಶೀಘ್ರದಲ್ಲಿಯೇ ಆ ಹಣ ಬಿಡುಗಡೆ ಮಾಡಿಸುವಂಥ ವ್ಯವಸ್ಥೆಯನ್ನು ಮಾಡುತ್ತೇನೆ.

ಫ್ಲೋರೈಡ್ ರಹಿತ ಕುಡಿಯುವ ನೀರನ್ನು ಒದಗಿಸುವುದು.

369 (2278) ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಗುಳೇದಗುಡ್ಡ) :– ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ಜಿಲ್ಲೆಯಲ್ಲಿ ಎಷ್ಟು ಹಳ್ಳಿಗಳ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಇರುವುದನ್ನು ಸರ್ಕಾರ ಗಮನಿಸಿದೆಯೇ;

ಆ) ಗಮನಿಸಿದ್ದರೆ, ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) ಈ ಸಮಸ್ಯೆಗೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆಯೆ?

ಶ್ರೀ ಎಸ್.ಎ. ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)

ಅ) ಬಾಗಲಕೋಟೆ ಜಿಲ್ಲೆಯ 135 ಗ್ರಾಮಗಳ ಕುಡಿಯುವ ನೀರಿನ ಜಲಮೂಲಗಳಲ್ಲಿ ಅಧಿಕ ಫ್ಲೋರೈಡ್ ಅಂಶವಿದೆ.